# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 798 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ: | 11-03-2020 |
| ಉತ್ತರಿಸುವವರು | ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ | ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿನ ತಿರುಪತಿ-ತಿರುಮಲ ಕರ್ನಾಟಕ ವಸತಿ ಗೃಹದ ನಿರ್ವಹಣೆಯನ್ನು ಯಾವ ಇಲಾಖೆಗೆ ವಹಿಸಲಾಗಿದೆ: | ತಿರುಮಲ-ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ವಸತಿ ಗೃಹದ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಧಾರ್ಮಿಕ ದತ್ತಿ ಇಲಾಖೆಯಡಿ ನಿರ್ವಹಿಸಲಾಗುತ್ತಿದೆ. |
| ಆ | ಸದರಿ ವಸತಿ ಗೃಹದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಗಮನಕ್ಕೆ ಬಂದಿದೆ. |
| ಇ | ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಸದರಿ ವಸತಿ ಗೃಹದಲ್ಲಿ ಭಕ್ತಾದಿಗಳ/ಯಾತ್ರಿಕರ ಸೌಲಭ್ಯಕ್ಕಾಗಿ ನಿರಂತರ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ ಮತ್ತು ಬಿಸಿ ನೀರಿನ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೆ, ತಿರುಮಲ ಕರ್ನಾಟಕ ಪ್ರವಾಸಿ ಸೌಧದ 86 ಕೊಠಡಿಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಾಗಿ ರೂ.400-00 ಲಕ್ಷಗಳ ಅಂದಾಜುಪಟ್ಟಿಗೆ ಸರ್ಕಾರವು ಆದೇಶ ಸಂಖ್ಯೆ: ಕಂಇ 68 ಮುಅಬಿ 2018 ದಿನಾಂಕ:19.03.2019 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಾಮಗಾರಿ ಅನುಷ್ಠಾನ ಹಂತದಲ್ಲಿರುತ್ತದೆ.<br><br>ಅಲ್ಲದೆ, ಕರ್ನಾಟಕ ರಾಜ್ಯ ಛತ್ರದ ಜಾಗದಲ್ಲಿ ನೂತನ ವಸತಿ ಗೃಹ, ಕಲ್ಯಾಣ ಮಂಟಪ ನಿರ್ಮಾಣ, ಕಲ್ಯಾಣಿ ದುರಸ್ತಿ, ವಸಂತ ಮಂಟಪ ಉದ್ಯಾನವನ ಹಾಗೂ ಇತ್ಯಾದಿ ಅಭಿವೃದ್ಧಿಗಳನ್ನು ಒಳಗೊಂಡಂತೆ ಮಹಾನಕ್ಷೆ ತಯಾರಿಸಿ ತಿರುಮಲ-ತಿರುಪತಿ ದೇವಸ್ಥಾನದ ಪ್ರಾಧಿಕಾರದವರಿಂದ ಅನುಮತಿ ಪಡೆದು, ನಂತರದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತದೆ. |
| ಈ | ಕರ್ನಾಟಕದ ಭಕ್ತಾಧಿಗಳಿಗೆ ಪಾರದರ್ಶಕವಾಗಿ ಸದರಿ ವಸತಿ ಗೃಹದಲ್ಲಿ ಕೊಠಡಿಗಳು ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಆದರೆ, ಈಗಾಗಲೇ ತಿರುಮಲದ ಕರ್ನಾಟಕ ರಾಜ್ಯ ಛತ್ರದ ಪ್ರವಾಸಿಸೌಧದಲ್ಲಿ ಕೊಠಡಿಗಳನ್ನು ಪಾರದರ್ಶಕವಾಗಿ ಆನ್-ಲೈನ್ ಮುಖಾಂತರ ಕರ್ನಾಟಕ-ಒನ್ ಸೆಂಟರ್‌ಗಳ ಮೂಲಕ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

| | | |
|---|---|---|
| | | ತಿರುಮಲ ಕರ್ನಾಟಕ ರಾಜ್ಯ ಛತ್ರದ ಕರ್ನಾಟಕ ಪ್ರವಾಸಿಸೌಧದಲ್ಲಿ 72 ಸಾಮಾನ್ಯ ಕೊಠಡಿಗಳು, 10 ಹವಾ ನಿಯಂತ್ರಿತ ಕೊಠಡಿಗಳು ಮತ್ತು ಗಣ್ಯವ್ಯಕ್ತಿಗಳಿಗೆ ನೀಡುವ ಹವಾ ನಿಯಂತ್ರಿತ 04 ಕೊಠಡಿಗಳನ್ನು ಒಳಗೊಂಡಂತೆ ಒಟ್ಟು 86 ಕೊಠಡಿಗಳು ಇರುತ್ತದೆ. ಇದರಲ್ಲಿ 40 ಕೊಠಡಿಗಳನ್ನು ಕರ್ನಾಟಕ-ಒನ್ ಮುಖಾಂತರ ಕಾಯ್ದಿರಿಸುವ ವ್ಯವಸ್ಥೆ ಇರುತ್ತದೆ. ಉಳಿದ 46 ಕೊಠಡಿಗಳನ್ನು ಗಣ್ಯಾತಿಗಣ್ಯರು ಹಾಗೂ ಅವರಿಂದ ಶಿಫಾರಸ್ಸು ಪತ್ರಗಳಿಗೆ ಆದ್ಯತೆ ಮೇರೆಗೆ, ಲಭ್ಯತೆಗೆ ಅನುಗುಣವಾಗಿ ಶಿಷ್ಟಾಚಾರದಂತೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. |
| ಉ | ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು | |

(ಸಂಖ್ಯೆಕಂಇ 33 ಮುಸಪ್ರ 2020)

**(ಕೋಟಾ ಶ್ರೀನಿವಾಸ ಪೂಜಾರಿ)**
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.